# ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಬನಹಟ್ಟಿ

**ಸಿಸಿ.575/2025**
**ಸಿ.ಡಬ್ಲ್ಯೂ:14 ಪಿ.ಡಬ್ಲ್ಯೂ: 10**

| | | |
|---|---|---|
| ಸಾಕ್ಷಿದಾರರ ಹೆಸರು | ಸಂತೋಷ ಕೌಜಲಗಿ | |
| ತಂದೆ ಹೆಸರು | ಅಣ್ಣಪ್ಪ | |
| ವಯಸ್ಸು | 41 | ವರ್ಷ |
| ಉದ್ಯೋಗ | ಸಿವಿಲ್ ಪೊಲೀಸ | |
| ವಾಸಸ್ಥಳ | ಬನಹಟ್ಟಿ | |

**ಸಾಕ್ಷಿಯನ್ನು ಇಂದು ದಿನಾಂಕಃ 01-12-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ಕಳೆದ 03 ವರ್ಷಗಳಿಂದ ನಾನು ಬನಹಟ್ಟಿ ಪೊಲೀಸ ಠಾಣೆಯಲ್ಲಿ ಸಿವಿಲ್ ಪೊಲಿಸ ಕರ್ತವ್ಯ ನಿರ್ವಹಿಸಿರುತ್ತಿದ್ದೇನೆ.

ದಿಃ 12-04-2025 ರಂದು ಸಿಹೆಚ್‌ಸಿ 427, ಚಾಸಾ- 15 ಮತ್ತು ನಾನು ಆಸಂಗಿ ಕ್ರಾಸ ಹತ್ತಿರ ವಾಹನಗಳ ತಪಾಸಣೆ ಮಾಡುತ್ತಿದ್ದಾಗ ಬೆಳಿಗ್ಗೆ 11-30 ಗಂಟೆ ಸುಮಾರಿಗೆ ಬನಹಟ್ಟಿ ಕಡೆಯಿಂದ ಹಿರೋ ಸ್ಪ್ಲೆಂಡರ ಪ್ಲಸ್ ವಾಹನವನ್ನು ಒಬ್ಬ ವ್ಯಕ್ತಿ ತೆಗೆದುಕೊಂಡು ಬರುತ್ತಿದ್ದಾಗ ಆತನನ್ನು ನಿಲ್ಲಿಸಿ, ಸದರಿ ವಾಹನದ ನಂಬರ ಪ್ಲೇಟ್ ಇರಲಿಲ್ಲ. ಅದಕ್ಕೆ ಸದರಿ ವ್ಯಕ್ತಿಯನ್ನು ವಾಹನದ ದಾಖಲಾತಿಗಳನ್ನು ಕೇಳಲಾಗಿ ಆತನ ದಾಖಲಾತಿಗಳು ಇರುವುದಿಲ್ಲ ಎಂದು ತಿಳಿಸಿದನು. ಆದ ಕಾರಣ ನಮಗೆ ಸದರಿ ವ್ಯಕ್ತಿ ಮೇಲೆ ಅನುಮಾನ ಬಂದಿದ್ದು , ಆತನನ್ನು ಠಾಣೆಗೆ ಕರೆದುಕೊಂಡು ಬರಲಾಯಿತು. ಠಾಣೆಗೆ ಕರೆದುಕೊಂಡು ಬಂದು ಸದರಿ ವ್ಯಕ್ತಿಯನ್ನು ನಮ್ಮ ಸಾಹೇಬರ ಮುಂದೆ ಹಾಜರುಪಡಿಸಿದೇವು. ನ್ಯಾಯಾಲಯದ ಮುಂದಿರುವ ವ್ಯಕ್ತಿಯನ್ನು ನಾನು ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ:**

ನಾನು ನಮ್ಮ ಇಲಾಖೆಯಲ್ಲಿ ಸುಮಾರು 18 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಬನಹಟ್ಟಿ ಪೊಲೀಸ ಠಾಣೆಗೆ 3 ವರ್ಷಯಾಗಿರುತ್ತದೆ. ಕಳ್ಳತನ ಮಾಹಿತಿ ನನಗೆ ಯಾರು ಕೊಟ್ಟಿರುವುದಿಲ್ಲ ನಾನು ವಾಹನಗಳ ಪರೀಕ್ಷೆ ಮಾಡುತ್ತಿದ್ದೇನು. ನಮ್ಮ ಸಾಹೇಬರ ಮುಂದೆ ಆರೋಪಿಯನ್ನು ಮತ್ತು 1 ಮೋಟಾರ ಸೈಕಲ್ ವಾಹನವನ್ನು ಹಾಜರುಪಡಿಸಿರುತ್ತೇನೆ. ಸದರಿ ವ್ಯಕ್ತಿಯನ್ನು ಹಾಗೂ ಮೋಟಾರ ವಾಹನವನ್ನು ನಾವು ದಸ್ತಗಿರ ಮಾಡುತ್ತಿದ್ದು ನಿಮ್ಮ ಸಾಹೇಬರಿಗೆ ಯಾವುದಾದರೂ ಲಿಖಿತವಾಗಿ ದಾಖಲೆಯನ್ನು ಕೊಟ್ಟಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಗೆ ನಮ್ಮ ಸಾಹೇಬರು ನಮ್ಮ ಜೊತೆ ಇದ್ದರು ಎಂದು ನುಡಿಯುತ್ತಾರೆ. ಯಾವ ದಿನದಂದು ಮತ್ತು ಯಾವ ಸಮಯದಂದು ಆರೋಪಿಯನ್ನು ಮತ್ತು ವಾಹವನ್ನು ಜಪ್ತು

ಮಾಡಿರುತ್ತೇನೆಂದು ಹೇಳುತ್ತೇನೆ. ಸದರಿ ವಾಹನಗಳ ತಪಾಸಣೆಗಾಗಿ ನಿಂತ ಸ್ಥಳವು ಸಾರ್ವಜನಿಕ ಸ್ಥಳ ಇದ್ದು ಅಲ್ಲಿ ಸಾಕಷ್ಟು ಸಾರ್ವಜನಿಕರು ಓಡಾಡುತ್ತಿದ್ದರು ಎಂದರೆ ಹೌದು. ಸದರಿ ಸ್ಥಳದಲ್ಲಿ ಯಾವುದೇ ಸಿಸಿಟಿವಿ ಕ್ಯಾಮೆರಾ ಇರಲಿಲ್ಲ. ಟ್ರಾಫಿಕ ನಿಯಮಗಳ ಪ್ರಕಾರ ಎಲ್ಲಾ ಕಡೆ ಸಿಸಿಟಿವಿ ಕ್ಯಾಮರಗಳು ಇರುತ್ತವೆ ಎಂದರೆ ಸಾಕ್ಷಿಯು ನಗರಗಳಲ್ಲಿ ಇರುತ್ತವೆ ಅದೇ ಗ್ರಾಮೀಣ ಪ್ರದೇಶದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ಹಾಗೂ ಮೋಟಾರ ಸೈಕಲ ಜಪ್ತು ಮಾಡಿದ ಸ್ಥಳದ ಯಾವುದೇ ಛಾಯಾ ಚಿತ್ರವನ್ನು ತೆಗೆದುಕೊಂಡಿರುವುದಿಲ್ಲ. ಸದರಿ ಛಾಯಾ ಚಿತ್ರವನ್ನು ತೆಗೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆತನ ಮೇಲೆ ಕೇವಲ ಅನುಮಾನ ಇದ್ದ ಕಾರಣ ಠಾಣೆಗೆ ಕರೆದುಕೊಂಡು ಬಂದಿದ್ದೆವು ಎಂದು ನುಡಿಯುತ್ತಾರೆ. ಆರೋಪಿತನ ಮೇಲೆ ಅನುಮಾನ ಹೇಗೆ ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಆತನ ಮೋಟಾರ ಸೈಕಲ್ ವಾಹನಕ್ಕೆ ನಂಬರ ಪ್ಲೇಟ ಇರದೆ ಇರುವ ಕಾರಣ ಅನುಮಾನ ಬಂದಿತ್ತು ಎಂದು ನುಡಿಯುತ್ತಾರೆ.

ನನ್ನ ಮೇಲಾಧಿಕಾರಿಗಳು ಸದರಿ ವಿಷಯದ ಕುರಿತು ಸೂಕ್ತ ಕ್ರಮ ಜರುಗಿಸಲಿಲ್ಲ ಎಂದರೆ ಸರಿಯಲ್ಲ. ಒಂದರಿಂದ ಒಂಭತ್ತು ವಾಹನಗಳನ್ನು ಮೇಲಾಧಿಕಾರಿಗಳು ಜಪ್ತು ಮಾಡಿಕೊಂಡಿರುತ್ತಾರೆ ನಾನು ಮಾಡಿರುವುದಿಲ್ಲ. ಒಂದರಿಂದ ಒಂಭತ್ತು ವಾಹನಗಳ ಪಿರ್ಯಾಧಿದಾರರು ಪರಿಚಯವಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೊಟ್ಟಿರುವ ದಾಖಲೆಗೆ ಹಾಗೂ ತನಿಖಾಧಿಕಾರಿಗೆ ಯಾವುದೇ ಸಂಬಂಧ ಇರದೆ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-
ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬನಹಟ್ಟಿ.